# ಸುದ್ದಿ ಸಂಚಯ

## "ಮಹಾಭಾರತ ಕಥಾಸಂಗ್ರಹ" ಗ್ರಂಥ ಬಿಡುಗಡೆ

31-8-2003 ಭಾನುವಾರ, ಗಣೇಶ ಚತುರ್ಥಿಯಂದು, ಮೈಸೂರು ರಾಮಕೃಷ್ಣ ಆಶ್ರಮದ ಸಭಾಂಗಣದಲ್ಲಿ "ಮಹಾಭಾರತ ಕಥಾ ಸಂಗ್ರಹ" ಎಂಬ ಹೊಸ ಕೃತಿಯನ್ನು ಬಿಡುಗಡೆ ಮಾಡಲಾಯಿತು. ಮೈಸೂರು ವಿಶ್ವವಿದ್ಯಾನಿಲಯದ ವಿವೇಕಾನಂದ ಪೀಠದ ಪ್ರಾಧ್ಯಾಪಕರಾದ ಡಾ. ಹೆಚ್. ರಾಮಚಂದ್ರಸ್ವಾಮಿಯವರು ರಚಿಸಿದ ಈ ಕೃತಿಯನ್ನು ಬಿಡುಗಡೆ ಮಾಡಿದವರು ಕನ್ನಡದ ಹೆಸರಾಂತ ಸಾಹಿತಿಗಳಾದ ಡಾ.ಸುಜನ ಅವರು. ಈ ಸಂದರ್ಭದಲ್ಲಿ ಅವರು ಮಾತನಾಡುತ್ತ, ಮಹಾಭಾರತವು ಒಂದು ದುರಂತ ಸಾಮಾಜಿಕ ಚಿತ್ರವನ್ನು ನೀಡುವುದರೊಂದಿಗೇ ನಾವು ಎಂತಹ ಜೀವನ ನಡೆಸಬೇಕೆಂಬುದರ ಬಗ್ಗೆ ಪಾಠವನ್ನು ಕಲಿಸುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಪ್ರಸ್ತುತ ಗ್ರಂಥವನ್ನು ಪ್ರಶಂಸಿಸುತ್ತ, ಅದು ಎ.ಆರ್. ಕೃಷ್ಣಶಾಸ್ತ್ರಿಗಳ ಪ್ರಸಿದ್ಧ ಕೃತಿಯಾದ "ವಚನಭಾರತ"ಕ್ಕೆ ಸರಿಸಮನಾಗಿ ನಿಲ್ಲಬಲ್ಲದು ಎಂದರು. ೪೭೨ ಪುಟಗಳಿರುವ ಈ ಗ್ರಂಥದ ಬೆಲೆ ಕೇವಲ ೬೦ ರೂಪಾಯಿಗಳು. ಈ ಗ್ರಂಥವನ್ನು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಿಂದ ಗ್ರಂಥದ ಬೆಲೆಯ ಜೊತೆಗೆ ಅಂಚೆ ಖರ್ಚು ರೂ ೨೫ ಅನ್ನು ಸೇರಿಸಿ ಕಳಿಸಿ ಪಡೆದುಕೊಳ್ಳಬಹುದು. ❋

## ಅಮೆರಿಕದ ಉತ್ತರ ಕ್ಯಾಲಿಫೋರ್ನಿಯಾ ವೇದಾಂತಸಂಸ್ಥೆಯ ಸ್ಮಾರಕೋತ್ಸವ

ಸಂಸ್ಥೆಗೆ ಸೇರಿದ ಒಲೇಮಾ ಎಂಬ ವಿಶಾಲ ಸ್ಥಳದಲ್ಲಿ ಈ ವಾರ್ಷಿಕ ಉತ್ಸವವನ್ನು ಮೇ ೨೬ರಂದು ಆಚರಿಸಲಾಯಿತು. ೮೫೦ ಜನರು ಇದರಲ್ಲಿ ಭಾಗವಹಿಸಿದ್ದರು. ದಕ್ಷಿಣ ಆಫ್ರಿಕಾದ ರಾಮಕೃಷ್ಣ ಕೇಂದ್ರದ ಮುಖ್ಯಸ್ಥರಾದ ಸ್ವಾಮಿ ಸಾರದಾನಂದರೂ, ಪೋರ್ಟ್ ಲ್ಯಾಂಡಿನ ಟಿಬೆಟನ್ ಬೌದ್ಧಸಂಘದ ಮುಖ್ಯಸ್ಥರಾದ ಗೇಶೇ ಕಾಲ್‌ಸಂಗ್ ದಾಮ್‌ದುಲ್ ಅವರೂ ಮುಖ್ಯ ಉಪನ್ಯಾಸಕರಾಗಿ ಭಾಗವಹಿಸಿದ್ದರು. ಉಪನ್ಯಾಸಗಳು, ಪರಸ್ಪರ ವಿಚಾರ ವಿನಿಮಯ, ಭಜನೆ ಪ್ರಸಾದವಿತರಣೆ ಮುಂತಾದ ಕಾರ್ಯಕ್ರಮಗಳೊಂದಿಗೆ ಇಡೀ ದಿನ ಉತ್ಸವ ನೆರವೇರಿತು. ❋

## ಪಶ್ಚಿಮದ ಮೇಲೆ ವಿವೇಕಾನಂದರ ಪ್ರಭಾವ

ಅಮೆರಿಕದ ಮ್ಯಾಸಾಚ್ಯುಸೆಟ್ಸ್ ವಿಶ್ವವಿದ್ಯಾನಿಲಯವು "ಪಶ್ಚಿಮದ ಮೇಲೆ ವಿವೇಕಾನಂದರ ಪ್ರಭಾವ" ಎಂಬ ವಿಷಯದ ಮೇಲೆ ಒಂದು ವಿಚಾರಗೋಷ್ಠಿಯನ್ನು ಜೂನ್ ೨೮ ಮತ್ತು ೨೯ ರಂದು ಏರ್ಪಡಿಸಿತ್ತು. ಅನೇಕ ವಿಶ್ವವಿದ್ಯಾನಿಲಯದ ವಿದ್ವಾಂಸರೂ, ರಾಮಕೃಷ್ಣ ಮಹಾಸಂಘದ ಸಂನ್ಯಾಸಿಗಳೂ, ವಿದ್ಯಾರ್ಥಿಗಳೂ, ಸಾರ್ವಜನಿಕರೂ ಇದರಲ್ಲಿ ಭಾಗವಹಿಸಿದ್ದರು. ❋


## ಶ್ರೀರಾಮಕೃಷ್ಣ ಶಾರದಾಶ್ರಮ, ಮಾತೃಧಾಮ

**ರತ್ನಗಿರಿ ರಸ್ತೆ, ಚಿಕ್ಕಮಗಳೂರು, ದೂರವಾಣಿ :08262-237258**

ಆತ್ಮೀಯ ಆಧ್ಯಾತ್ಮಿಕ ಬಂಧುಗಳೇ,

ಆಶ್ರಮದಲ್ಲಿ ನವರಾತ್ರಿ ಪ್ರಯುಕ್ತ ಶ್ರೀ ದೇವಿ ಭಾಗವತ ಮಹಾಪುರಾಣದ ಪ್ರವಚನ ಹಾಗೂ ಹೋಮಹವನಗಳನ್ನು ಆಯೋಜಿಸಲಾಗಿದೆ. ತಾವುಗಳೆಲ್ಲ ಭಾಗವಹಿಸಿ ಸಹಕರಿಸಬೇಕಾಗಿ ವಿನಂತಿ.

ಭಗವತ್ಸೇವೆಯಲ್ಲಿ

*ಮಾತಾ ಜ್ಯೋತಿರ್ಮಯಿ ಭಾರತಿ*

### *ಕಾರ್ಯಕ್ರಮಗಳು*

ಶ್ರೀದೇವಿ ಭಾಗವತ ಪ್ರವಚನ : **ದಿನಾಂಕ 24ನೆ ಸೆಪ್ಟೆಂಬರ್ 2003ರಿಂದ 19ನೇ ಅಕ್ಟೋಬರ್ 2003ರವರೆಗೆ**
**ಸಮಯ: ಬೆಳಗ್ಗೆ7ರಿಂದ 8/ ಸಂಜೆ 6.30ರಿಂದ 8.00**

ಉದ್ಘಾಟನೆ ಮತ್ತು ಆಶೀರ್ವಚನ : **ದಿನಾಂಕ 24.09.2003, ಸಂಜೆ 6.30ಕ್ಕೆ, ಪರಮ ಪೂಜ್ಯ ಸ್ವಾಮಿ ಪೂರ್ಣಕಾಮಾನಂದಜಿ ಮಹಾರಾಜ್, ಅಧ್ಯಕ್ಷರು, ಶ್ರೀ ರಾಮಕೃಷ್ಣ ಮಠ, ಮಂಗಳೂರು ಅವರಿಂದ**

ಹೋಮ: *ಪ್ರತಿದಿನ ಬೆಳಗ್ಗೆ ೧೦ರಿಂದ* **ದಿನಾಂಕ 15.10.2003ರಂದು ಶ್ರೀ ಗಣಪತಿ, ನವಗ್ರಹ ಹೋಮ, 16.10.2003ರಂದು ಗಾಯತ್ರಿ ಹೋಮ, ದಿನಾಂಕ 17.10.2003ರಂದು ಲಲಿತಾ ಹೋಮ, 18.10.2003 ರಂದು *ದುರ್ಗಾ ಹೋಮ*, 19.10.2003 ರಂದು *ಚಂಡಿಕಾ ಹೋಮ*ವಿರುತ್ತದೆ. ಹೋಮದಲ್ಲಿ ಪ್ರತಿದಿನ ಮಧ್ಯಾಹ್ನ ಅನ್ನಸಂತರ್ಪಣೆ ಇರುತ್ತದೆ. ಪ್ರತಿದಿನ ಸಂಜೆ 6.30ಕ್ಕೆ ಸಂತರಿಂದ ಆಧ್ಯಾತ್ಮಿಕ ಸತ್ಸಂಗವಿರುತ್ತದೆ. ದಿನಾಂಕ 19.10.2003ರ ಸಂಜೆ 6.30ಕ್ಕೆ ವಿದುಷಿ ಶ್ರೀಮತಿ ನಾಗಲಕ್ಷ್ಮಿ ಇವರಿಂದ ಗಿರಿಜಾಕಲ್ಯಾಣ ಹರಿಕಥೆ ಇರುತ್ತದೆ.**

### ತಮ್ಮೆಲ್ಲರಿಗೂ ಆದರದ ಸ್ವಾಗತ

**ವಿ.ಸೂ. ೧. ಈ ಮಹೋತ್ಸವದ ಸೇವಾರ್ಥವಾಗಿ ಅನ್ನಸಂತರ್ಪಣೆ ಮತ್ತು ಹೋಮದ ಖರ್ಚು ವೆಚ್ಚಗಳಿಗೆ ರೂ.101/- ಅಥವಾ ಯಥಾಶಕ್ತಿ ಸಹಾಯಧನವನ್ನು ಭಕ್ತಾದಿಗಳಿಂದ ಕೋರಲಾಗಿದೆ. ೨. ಹೋಮಕ್ಕೆ ಧನ ಧಾನ್ಯ ಆಹಾರವಸ್ತುಗಳನ್ನು ಹೃತ್ಪೂರ್ವಕವಾಗಿ ಸ್ವೀಕರಿಸಲಾಗುತ್ತದೆ. ೩. ಕ್ರಾಸ್ ಮಾಡಿದ ಚೆಕ್, ಡ್ರಾಫ್ಟ್, ಮನಿ ಆರ್ಡರ್‌ಗಳನ್ನು ಶ್ರೀರಾಮಕೃಷ್ಣ ಶಾರದಾಶ್ರಮ, ಚಿಕ್ಕಮಗಳೂರು ಹೆಸರಿನಲ್ಲಿ ಕಳುಹಿಸುವುದು. ೪. ನೀವು ನೀಡುವ ಎಲ್ಲಾ ಕಾಣಿಕೆಗಳು ಆದಾಯ ತೆರಿಗೆ ಅಧಿನಿಯಮ 80(ಜಿ) ಅನ್ವಯ ಆದಾಯ ತೆರಿಗೆಯಿಂದ ಮುಕ್ತವಾಗಿರುತ್ತದೆ.**